**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಧೀಶರ ನ್ಯಾಯಾಲಯ ಯಾದಗಿರಿ.**

**ಸಿಸಿ ನಂ. 92/2018**

| | | |
|---|---|---|
| ಸಾಕ್ಷಿಯ ಹೆಸರುಃ | ವೆಂಕಟೇಶ | ಫ್ರಾಸಾಃ 3 |
| ತಂದೆ/ಗಂಡನ ಹೆಸರುಃ | ಪುನ್ಯಾ | ಚಾಸಾಃ 5 |
| ವಯಸ್ಸು ಃ | 32 ವರ್ಷ | ದಿಃ 17-06-2023 |
| ಉದ್ಯೋಗಃ | ಕೂಲಿಕೆಲಸ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಮುದ್ನಾಳ ಉಮಲಾ ನಾಯಕ ತಾಂಡಾ | |

<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ</u>

ನನಗೆ ಚಾಸಾಃ 1, 4, 6 ರವರ ಪರಿಚಯವಿದೆ. ನನಗೆ ಆರೋಪಿತನ ಪರಿಚಯವಿದೆ. 5 ವರ್ಷದ ಹಿಂದೆ ಘಟನೆ ಜರುಗಿರುತ್ತದೆ. ನಮ್ಮ ಮನೆಯ ಮುಂದೆ ನಾನು ಮತ್ತು ಚಾಸಃ 6 ರವರು ಮಾತನಾಡುತ್ತಾ ಕುಳಿತಿರುವಾಗ, ಚಾಸಾಃ 1 ಮತ್ತು ಚಾಸಾಃ 4 ರವರು ಮನೆಯ ಮುಂದೆ ನಿಂತಿರುವಾಗ, ಆರೋಪಿತನು ಬಂದು ಚಾಸಾಃ 4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ. ಆವಾಗ ಚಾಸಾಃ 1 ರವರು ಚಾಸಾಃ 4 ರವರನ್ನು ಮನೆಯ ಒಳಗಡೆ ಕರೆದುಕೊಂಡು ಹೋಗಿ ಬಾಗಿಲು ಚಿಲಕ ಹಾಕಿರುತ್ತಾರೆ. ಆರೋಪಿತನು ಕೈಯಲ್ಲಿರುವ ಕೊಡಲಿಯಿಂದ ಬಾಗಿಲಿಗೆ ಹೊಡೆದ ನಂತರ ಬಾಗಿಲು ಎರಡು ಭಾಗವಾಗಿ ಮುರಿದಿರುತ್ತದೆ. ಅದು 10,000/- ರೂಪಾಯಿಯಷ್ಟು ಲುಕ್ಸಾನು ಆಗಿರುತ್ತದೆ. ಚಾಸಾಃ 4 ರವರು ಮನೆಯ ಹೊರಗೆ ಬಂದ ನಂತರ ಆರೋಪಿತನು ಚಾಸಾಃ 4 ರವರ ಕಾಲರ ಹಿಡಿದು ಎಳೆದು ಕೈಯಿಂದ, ಕಾಲಿನಿಂದ ಹೊಡೆದಿರುತ್ತಾನೆ. ಆ ಸಂದರ್ಬದಲ್ಲಿ ಚಾಸಾಃ 1 ರವರು ಜಗಳವನ್ನು ಬಿಡಿಸಲು ಹೋದಾಗ ಆರೋಪಿತನು ಸೀರೆ ಸೆರಗು ಎಳೆದು ಮಾನಭಂಗ ಮಾಡಲು ಪ್ರಯತ್ನ ಮಾಡಿರುತ್ತಾನೆ. ಆಗ ನಾನು ಮತ್ತು ಚಾಸಾಃ 6 ರವರು ಹೋಗಿ ಜಗಳವನ್ನು ಬಿಡಿಸಿರುತ್ತೇವೆ. ನಂತರ ಚಾಸಾಃ 1 ಮತ್ತು 4 ರವರು ಆರೋಪಿತನ ವಿರುದ್ದ ದೂರನ್ನು ಸಲ್ಲಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯನ್ನು ನುಡಿದಿದ್ದು ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರು ಪಾಟಿ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

ಆರೋಪಿತನು ಚಾಸಾಃ 1 ಮತ್ತು ಚಾಸಾಃ 4 ರವರಿಗೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು. ಮಾ. 1 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಶ್ರೀ ಜಿ. ಬಿ. ಎನ್. ಇವರಿಂದ**

1. ಚಾಸಾಃ 1 ಮತ್ತು ಚಾಸಾಃ 4 ರವರು ನನ್ನ ಖಾಸಾ ಕಾಕನ ಮಕ್ಕಳು ಆಗಬೇಕು. ಚಾಸಾಃ 6 ರವರು ನಮಗೆ ಸಂಬಂಧಿಕರಾಗಬೇಕು. ಚಾಸಾಃ 1 ಮತ್ತು ಚಾಸಾಃ 4 ರವರು ಚಾಸಾಃ 6 ರವರಿಗೆ ಸಂಬಂಧಿಕರಾಗಬೇಕು ಎಂದರೆ ಸರಿ. ಚಾಸಾಃ 1 ಮತ್ತು ಚಾಸಾಃ 4 ರವರಿಗೆ ಚಾಸಾಃ 2 ಮತ್ತು ಚಾಸಾಃ 3 ರವರು ಸಂಬಂಧಿಕರಾಗಬೇಕು. ನನ್ನ ಮತ್ತು ಚಾಸಾಃ 1 ರವರ ಮನೆಯ ನಡುವೆ 60 ಫೀಟ್ ಅಷ್ಟು ಅಂತರವಿದೆ.

2. ಚಾಸಾಃ 6 ಮತ್ತು ನನ್ನ ಮನೆಯ ನಡುವೆ 500 ಫೀಟ್ ಅಂತರದಲ್ಲಿದೆ. ಚಾಸಾಃ 1 ಮತ್ತು ಚಾಸಾಃ 6 ರವರ ಮನೆಯ ನಡುವೆ 500 ಫೀಟ್ ಅಂತರದಲ್ಲಿದೆ. ನಾನು ಮತ್ತು ಚಾಸಾಃ 6 ರವರು ಮಾತನಾಡುವಾಗ ಮುಂಜಾನೆ 7-00 ಗಂಟೆಯಾಗಿತ್ತು. ನಾನು ಹೋಗುವಷ್ಟರಲ್ಲಿ ಜಗಳ ಮುಗಿದಿತ್ತು ಎಂದರೆ ಸರಿಯಲ್ಲ. ನಾನು ಹೋಗುವಾಗ ಆರೋಪಿತನು ಚಾಸಾಃ 1 ಮತ್ತು ಚಾಸಾಃ 4 ರವರಿಗೆ ಬೈಯುತ್ತಿದ್ದನು. ಸದರಿ ಜಗಳವಾದ ಸಮಯದಲ್ಲಿ 10 ಜನರು ಇದ್ದರು. ಅವರ ಹೆಸರು ನನಗೆ ಹೇಳಲು ಬರುವುದಿಲ್ಲ. ಚಾಸಾಃ 1 ಮತ್ತು ಆರೋಪಿತನ ಮನೆಯ ನಡುವೆ ಸುಮಾರು 700-800 ಫೀಟ್ ಅಂತರವಿದೆ ಎಂದು ನುಡಿಯುತ್ತಾರೆ. ಚಾಸಾಃ 1 ಮತ್ತು ಚಾಸಾಃ 4 ರವರು ಆರೋಪಿತನ ಖಾಸಾ ಕಾಕನ ಮಕ್ಕಳು ಎಂದರೆ ಸರಿ.

3. ಪೋಲಿಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

**ಮುಂದುವರೆ ಪಾಟಿ ಸವಾಲು ಮಾದ್ಯಹ್ನ 3-00 ಗಂಟೆಗೆ ಮುಂದೂಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು ಯಾದಗಿರಿ**